# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)

## ಅನುಪಯುಕ್ತ ಅಂಬಾಸಿಡರ್ ಕಾರ್ ವಿಲೇವಾರಿಗಾಗಿ ಅರ್ಜಿ ನಮೂನೆ

ಇವರಿಂದ

ಇವರಿಗೆ

ಡೀನ್ ಕಮ್ ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

ಮಾನ್ಯರೇ,

ವಿಷಯ:- ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ನಿರುಪಯುಕ್ತ ಅಂಬಾಸಿಡರ್ ಕಾರ್‌ನ್ನು ಟೆಂಡರ್ ಕಮ್ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು

-----**-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಂಸ್ಥೆಯ ಅಧಿಸೂಚನೆ ಸಂಖ್ಯೆ:ಸದಂಕಾಸಂಸಂ/ಸರಬ/22/2001-02 ದಿನಾಂಕ:06.03.2019ರ ಪ್ರಕಾರ ನಾನು/ನಾವುಗಳು ಅನುಪಯುಕ್ತ ಅಂಬಾಸಿಡರ್ ಕಾರ್ ಸಂಖ್ಯೆ ಕೆಎ-01 ಜಿ 3259 ನಿರುಪಯುಕ್ತಗೊಳಿಸುವ ಸಂಬಂಧ ಟೆಂಡರ್ ಕಮ್ ಹರಾಜು ನಿಬಂಧನೆ ಷರತ್ತುಗಳಿಗೆ ಒಪ್ಪಿ ದರ ನಮೂದಿಸಿ ಸಲ್ಲಿಸುತ್ತಿದ್ದೇನೆ.

| ಕ್ರಮ ಸಂಖ್ಯೆ | ಅನುಪಯುಕ್ತ ವಸ್ತುಗಳ ವಿವರ | ಪರಿಮಾಣ | ಮೊತ್ತ ರೂ. (ಅಂಕಿಗಳಲ್ಲಿ) | ಮೊತ್ತ (ಅಕ್ಷರಗಳಲ್ಲಿ) |
|---|---|---|---|---|
| 1 | ಅಂಬಾಸಿಡರ್ ಕಾರ್ | 01 | | |

ಬಿಡ್ಡುದಾರರು ಸಹಿ ಮತ್ತು ಸಂಸ್ಥೆಯ ಮೊಹರು

ಕರ್ನಾಟಕ ಸರ್ಕಾರ
Government of Karnataka

# ಸರ್ಕಾರಿ ದಂತ ಕಾಲೇಜು & ಸಂಶೋಧನಾ ಸಂಸ್ಥೆ, ಬೆಂಗಳೂರು

# Government Dental College & Research Institute, Bangalore

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institute)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು -2. Victoria Hospital Campus, Fort, B'lore-2
www.karnataka.gov.in/gdcrib Email- gdcribangalore@gmail.com Phone/Fax: 080-26705053 / 26703176

ಸಂಖ್ಯೆ:ಸದಂಕಾಸಂಸಂ/ಸರಬ/22/2001-02

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ:06.03.2019

ಇವರಿಗೆ,

ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

ಮಾನ್ಯರೇ,

ವಿಷಯ:- ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ಅನುಪಯುಕ್ತ ಅಂಬಾಸಿಡರ್ ಕಾರ್‌ನ್ನು ವಿಲೇವಾರಿ ಮಾಡುವ ಕುರಿತು

---**---

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ಅನುಪಯುಕ್ತ ಅಂಬಾಸಿಡರ್ ಕಾರ್ ಸಂಖ್ಯೆ ಕೆಎ-01 ಜಿ 3259 ಟೆಂಡರ್ ಕಮ್ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಸಂಸ್ಥೆಯ ವತಿಯಿಂದ ಅಧಿಸೂಚನೆ ಹೊರಡಿಸಲಾಗಿದೆ **(ಅಧಿಸೂಚನೆ ಪ್ರತಿ ಲಗತ್ತಿಸಿದೆ)** ಆದುದರಿಂದ ಸದರಿ ಅಧಿಸೂಚನೆಯನ್ನು ಟೆಂಡರ್ ಬುಲೆಟಿನಲ್ಲಿ ಪ್ರಕಟಿಸಲು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

# ಟೆಂಡರ್ ನಿಬಂಧನೆ ಮತ್ತು ಷರತ್ತುಗಳು

1) ಅಂಬಾಸಿಡರ್ ಕಾರ್ ಸಂಖ್ಯೆ ಕೆಎ-01 ಜಿ 3259 ವಿಲೇವಾರಿಯ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಆಸಕ್ತ ಬಿಡ್‌ದಾರರು ನಿಗದಿತ ಅರ್ಜಿ ನಮೂನೆಯನ್ನು ಹಾಗೂ ಟೆಂಡರ್ ನಿಬಂಧನೆ ಮತ್ತು ಷರತ್ತುಗಳನ್ನು ಸಂಸ್ಥೆಯ https://www.karnataka.gov.in/gdcrib/pages/home.aspx ವೆಬ್‌ಸೈಟ್‌ನಲ್ಲಿ/ಕಛೇರಿಯಲ್ಲಿ ಪಡೆದುಕೊಳ್ಳತಕ್ಕದ್ದು.

2) ಆಸಕ್ತಿಯುಳ್ಳ ಬಿಡ್‌ದಾರರು ಅನುಪಯುಕ್ತ ಅಂಬಾಸಿಡರ್ ಕಾರ್ ಖರೀದಿಸಲು ಅರ್ಜಿ ಶುಲ್ಕವಾಗಿ ಡಿಡಿ ರೂ.300/-ಗಳನ್ನು ಡೀನ್ ಕಮ್ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಟೆಂಡರ್ ನಮೂನೆಯನ್ನು ಭರ್ತಿ ಮಾಡಿ, ಸೀಲ್ ಮಾಡಿ ದಿನಾಂಕ: 05.04.2019 ರಂದು ಬೆಳಿಗ್ಗೆ 11.00 ಗಂಟೆಯೊಳಗೆ ಅರ್ಜಿ ಶುಲ್ಕದೊಂದಿಗೆ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಲ್ಲಿಸತಕ್ಕದ್ದು. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

3) ಟೆಂಡರ್ ಅರ್ಜಿ ಜೊತೆ ಭದ್ರತಾ ಠೇವಣಿಯಾಗಿ ರೂ.5000/-ಗಳ ಡಿ.ಡಿಯನ್ನು ಡೀನ್ ಕಂ ನಿರ್ದೇಶಕರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.

4) ಟೆಂಡರ್‌ನಲ್ಲಿ ಯಶಸ್ವಿಯಾಗದವರಿಗೆ ಭದ್ರತಾ ಠೇವಣಿ ಹಣ ಕೂಡಲೇ ವಾಪಸ್ ಕೊಡಲಾಗುವುದು.

5) ಟೆಂಡರ್ ಲಕೋಟೆಯನ್ನು ತೆರೆಯುವ ದಿನಾಂಕ: 05.04.2019ರ ಬೆಳಿಗ್ಗೆ 11.30 ಗಂಟೆಗೆ ಡೀನ್ ಕಮ್ ನಿರ್ದೇಶಕರ ಕೊಠಡಿ, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

6) ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ರವರ ಮೇಲು ಉಸ್ತುವಾರಿಯಲ್ಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳ ಉಸ್ತುವಾರಿಯಲ್ಲಿ ಅನುಪಯುಕ್ತ ಅಂಬಾಸಿಡರ್ ಕಾರ್‌ನ್ನು ವಿಲೇವಾರಿಯ ಕೆಲಸವನ್ನು ನಡೆಸುವರು. ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್ಡುದಾರರು ಅನುಪಯುಕ್ತ ಅಂಬಾಸಿಡರ್ ಕಾರ್‌ನ್ನು ತಮ್ಮ ಬೆಲೆಯ ಬಿಡ್ಡನ್ನು ಅರ್ಜಿ ನಮೂನೆಯಲ್ಲಿಯೇ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

7) ಯಶಸ್ವಿಯಾದ ಬಿಡ್ಡುದಾರರು ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟು ಮೊತ್ತವನ್ನು ಕೂಡಲೇ ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರ ಕಛೇರಿಯ ನಗದು ವಿಭಾಗದಲ್ಲಿ ಪಾವತಿ ಮಾಡತಕ್ಕದ್ದು, ವಿಲೇವಾರಿ ಆದೇಶ ಪತ್ರ ಬಿಡ್ಡುದಾರರಿಗೆ ತಲುಪಿದ ಒಂದು ದಿನಗಳೊಳಗೆ ಬಾಕಿ ಶೇಕಡ 50ರಷ್ಟು ಮೊತ್ತ ಮತ್ತು ತೆರಿಗೆ ಹಣವನ್ನು ಪಾವತಿ ಮಾಡತಕ್ಕದ್ದು ನಂತರ ಅನುಪಯುಕ್ತ ವಸ್ತುಗಳನ್ನು ತೆಗೆದುಕೊಳ್ಳದಿದ್ದಲ್ಲಿ ಬಿಡ್ಡುದಾರರ ಬಿಡ್ಡನ್ನು ರದ್ದುಗೊಳಿಸಲಾಗುವುದು ಹಾಗೂ ಅನುಪಯುಕ್ತ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಪ್ರತ್ಯೇಕವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು.

8) ಎಲ್ಲಾ ನಗದು ಪಾವತಿಗಳನ್ನು ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರ ನಗದು ವಿಭಾಗದಲ್ಲಿ ಮಾತ್ರ ಪಾವತಿ ಮಾಡತಕ್ಕದ್ದು.

9) ಬಿಡ್ಡುದಾರರು ಪಾವತಿ ಮಾಡಿರುವ ಠೇವಣಿ ಹಣವನ್ನು ಅನುಪಯುಕ್ತ ವಸ್ತುಗಳ ಬಾಕಿ ಇರುವ ಶೇಕಡ 50 ರಷ್ಟು ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗುವುದಿಲ್ಲ. ಬಿಡ್ಡುದರರು ಎಲ್ಲಾ ನಿಬಂಧನೆ ಮತ್ತು ಷರತ್ತುಗಳನ್ನು ಪೂರೈಸಿ ಅನುಪಯುಕ್ತ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದ ನಂತರ ಠೇವಣಿ ಮೊತ್ತ ರೂ.5,000/-ಗಳನ್ನು ಲೆಕ್ಕ ಶಾಖೆಯಿಂದ ವಾಪಸ್ ಪಡೆಯಬಹುದಾಗಿದೆ.

10) ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರು ಅನುಪಯುಕ್ತ ವಸ್ತುಗಳ ವಿಲೇವಾರಿಯನ್ನು ದೃಢೀಕರಿಸಿದ ನಂತರಸಂಬಂಧಪಟ್ಟ ಬಿಡ್ಡುದಾರರಿಗೆ ಅನುಪಯುಕ್ತ ಅಂಬಾಸಿಡರ್ ಕಾರ್‌ನ್ನು ಕಛೇರಿ ವೇಳೆಯಲ್ಲಿ ಮಾತ್ರ ವಿಲೇವಾರಿ ಮಾಡಲಾಗುವುದು.

11) ಯಶಸ್ವಿಯಾದ ಬಿಡ್ಡುದಾರರು ನಿಗದಿತ ಅವಧಿಯಲ್ಲಿ ಹಣವನ್ನು ಪಾವತಿ ಮಾಡದಿದ್ದಲ್ಲಿ ಅಥವಾ ಈ ಇಲಾಖೆಗೆ ಯಾವುದೇ ರೀತಿಯ ನಷ್ಟ ಉಂಟು ಮಾಡಿದ್ದಲ್ಲಿ ನಷ್ಟದ ಮೊತ್ತವನ್ನು ಭದ್ರತಾ ಠೇವಣಿ ಹಾಗೂ ಪಾವತಿ ಮಾಡಲಾದ ಬಿಡ್ಡಿನ ಶೇಕಡ 50ರಷ್ಟು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

12) ಜಿ.ಎಸ್.ಟಿ ಮತ್ತು ಇತರೆ ಚಾರ್ಜಗಳನ್ನು ಮಾರಾಟದ ದಿನದಂದು ಅನ್ವಯಿಸುವಂತೆ ಪ್ರತ್ಯೇಕವಾಗಿ ಬಿಡ್ಡಿನ ಅಥವಾ ಹರಾಜಿನ ಮೊತ್ತಕ್ಕೆ ವಿಧಿಸಲಾಗುವುದು.

13) ಅನುಪಯುಕ್ತ ಅಂಬಾಸಿಡರ್ ಕಾರ್‌ನ್ನು ಖರೀದಿಸಲು ಖರೀದಿದಾರರಿಂದ ನಿರೀಕ್ಷೆ ಮಟ್ಟದ ಪ್ರತಿಕ್ರಿಯೆ ಬರದಿದ್ದಲ್ಲಿ ಬಹಿರಂಗ ಹರಾಜನ್ನು ನಡೆಸಲಾಗುತ್ತದೆ.

14) ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಇವರು ಯಾವುದೇ ಕಾರಣವನ್ನು ನೀಡದೇ ಟೆಂಡರ್ ಸ್ವೀಕರಿಸುವ ಹಾಗೂ ತಿರಸ್ಕರಿಸುವ, ಮುಂದೂಡುವ ಅಥವಾ ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತಾರೆ. ಡೀನ್ ಕಂ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಮತ್ತು ಅವರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ.

15) ಸದರಿ ಅಂಬಾಸಿಡರ್ ಕಾರ್‌ನ್ನು ಸ್ಕ್ರಾಪ್‌ಗೊಳಿಸಲಾಗಿದ್ದು, ವಿಲೇವಾರಿಯ ನಂತರ ನೊಂದಾಣಿ ರದ್ದತಿಗಾಗಿ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಕಛೇರಿಗೆ ಈ ಸಂಸ್ಥೆಯ ವತಿಯಿಂದ ತಿಳಿಸಲಾಗುತ್ತದೆ. ಸದರಿ ವಾಹನವನ್ನು ಖರೀದಿಸಿದ ನಂತರ ರಸ್ತೆಯ ಮೇಲೆ ಉಪಯೋಗಿಸುವಂತಿಲ್ಲ. ಸ್ಕ್ರಾಪ್‌ಗಾಗಿ ಬಳಸತಕ್ಕದ್ದು.

16) ಸದರಿ ಅಂಬಾಸಿಡರ್ ಕಾರ್‌ನ್ನು ಎಲ್ಲಿದೆಯೋ ಅಲ್ಲೇ, ಹೇಗಿದೆಯೋ ಹಾಗೆಯೇ ಟೆಂಡರ್ ಕಮ್ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

17) ಎಂ.ಎಸ್.ಟಿ.ಸಿ ಸಂಸ್ಥೆಯವರಿಗೆ ವಿಲೇವಾರಿ ಕಾರ್ಯವನ್ನು ವಹಿಸಲಾಗಿರುತ್ತದೆ. ಈ ಟೆಂಡರ್ ಅವದಿಯೊಳಗೆ ಸದರಿ ವಾಹನವು ಸಂಸ್ಥೆ ನಿರೀಕ್ಷಿದಷ್ಟು ಮೊತ್ತಕ್ಕೆ ವಿಲೇವಾರಿಯಾದಲ್ಲಿ ಎಂ.ಎಸ್.ಟಿ.ಸಿ ಸಂಸ್ಥೆಯ ಮೂಲಕ ವಿಲೇವಾರಿ ಮಾಡಲಾಗುವುದು.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.